# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು ಕಛೇರಿಯ ಮಾಹಿತಿ ಹಕ್ಕು ಅಧಿನಿಯಮ 2005ರಡಿ 4(1)ಬಿ ಪ್ರಕಾರ ಮಾಹಿತಿ.

**ಪೀಠಿಕೆ:-**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಈ ಕಛೇರಿ ಜಿಲ್ಲಾ ಪಂಚಾಯಿತಿಗೆ ಸಂಬಂದಿಸಿದ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಕಛೇರಿ ತಾಲ್ಲೂಕು ಆರೋಗ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜಿಲ್ಲೆಯಲ್ಲಿ ಹೊಂದಿದ್ದು ಎಲ್ಲಾ ಅಧೀನ ಕಛೇರಿಗಳಿಂದ ಆಡಳಿತ ನಿಯಂತ್ರಣ ಆರೋಗ್ಯ ಸಾರ್ವಜನಿಕ ಕುಂದುಕೊರತೆ, ಆರೋಗ್ಯ ಶಿಕ್ಷಣ, ಮಾಹಿತಿ ಮಾರ್ಗದರ್ಶನ ಮತ್ತು ಸಲಹೆ ನೀಡಲು ಈ ಕಳಕಂಡ ಶಾಖೆಗಳನ್ನು ಹೊಂದಿರುತ್ತದೆ.

1. **ಸಿಬ್ಬಂದಿ ಶಾಖೆ (1) (2) (3) (4) (5)**
2. **ಅಭಿವೃದ್ದಿ ಶಾಖೆ**
3. **ಆರೋಗ್ಯ ಶಿಕ್ಷಣ ಶಾಖೆ**
4. **ಮಲೇರಿಯಾ ನಿಯಂತ್ರಣ ಶಾಖೆ**
5. **ಸರಬರಾಜು ಶಾಖೆ**
6. **ಶುಶ್ರೂಷಣಾ ದಾದಿಯರ ಶಾಖೆ**
7. **ಆಪ್ತ ಶಾಖೆ**
8. **ಬೆರಳಚ್ಚು ಶಾಖೆ**
9. **ಸಾರ್ವಜನಿಕ ಕುಂದುಕೊರತೆ ಶಾಖೆ**
10. **ಲೆಕ್ಕಶಾಖೆ ಸಿಬ್ಬಂದಿ (2210)**
11. **ಲೆಕ್ಕ ಶಾಖೆ ಸಿಬ್ಬಂದಿ (2211)**
12. **ವಾಹನ ಶಾಖೆ**

ಹಾಗೂ ಸಿಬ್ಬಂದಿ ಹಾಗೂ ಲೆಕ್ಕ ವಿಭಾಗಕ್ಕೆ ಕಛೇರಿ ಅಧೀಕ್ಷಕರು.

## ನಮೂನೆ

**ಸಕ್ಷನ್ 3 ರ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರಿಗಳ ಸ್ವಯಂ ನಿರ್ವಹಿಸಬೇಕಾದ ಕರ್ತವ್ಯಗಳ ಪ್ರಪತ್ರ.**

1. ಇಲಾಖೆ ಹೆಸರು:- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಚಿಕ್ಕಮಗಳೂರು
2. ಸಾರ್ವಜನಿಕ ಪ್ರಾಧಿಕಾರಿಗಳ ಸಂಖ್ಯೆ: 1. ಸಿಬ್ಬಂದಿ ಶಾಖೆ (1) (2) (3) (4) (5)
   2. ಅಭಿವೃದ್ದಿ ಶಾಖೆ
   3. ಆರೋಗ್ಯ ಶಿಕ್ಷಣ ಶಾಖೆ
   4. ಮಲೇರಿಯಾ ನಿಯಂತ್ರಣ ಶಾಖೆ
   5. ಸರಬರಾಜು ಶಾಖೆ
   6. ಶುಶ್ರೂಷಣಾ ದಾದಿಯರ ಶಾಖೆ

7. ಆಪ್ತ ಶಾಖೆ
8. ಬೆರಳಚ್ಚು ಶಾಖೆ
9. ಸಾರ್ವಜನಿಕ ಕುಂದುಕೊರತೆ ಶಾಖೆ
10. ಲೆಕ್ಕಶಾಖೆ ಸಿಬ್ಬಂದಿ (2210)
11. ಲೆಕ್ಕ ಶಾಖೆ ಸಿಬ್ಬಂದಿ (2211)
12. ವಾಹನ ಶಾಖೆ

ಮೇಲ್ಕಂಡ ಅಧಿಕಾರ ಮತ್ತು ಕಾರ್ಯ ನಿರ್ವಹಣೆಯು ಕಛೇರಿ ಕಾರ್ಯ ವಿಧಾನ, ಕಛೇರಿ ಕೈಪಿಡಿ ರೀತ್ಯ, ನಿಗದಿತ ವಿಭಾಗ ಹಾಗೂ ವಹಿಗಳೊಂದಿಗೆ ಹಾಗೂ ಕಡತಗಳೊಂದಿಗೆ ಈ ಕಛೇರಿ ಕೆಲಸ ನಿರ್ವಹಿಸಲಾಗುತ್ತಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮಂಜೂರಾತಿ ವಿವರಗಳು.

| ಕ್ರ.ಸಂ | ಅಧಿಕಾರಿಗಳು | ಮಂ. ಹುದ್ದೆ | ಕಾರ್ಯ ನಿರತ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 1) | ಜಿಲ್ಲಾ ಆರೋಗ್ಯ ಮತ್ತು ಕುಟುಂಬಕಲ್ಯಾಣಾಧಿಕಾರಿಗಳು | 1 | 1 | - |
| 2) | ತಾಲ್ಲೂಕು ಆರೋಗ್ಯಾಧಿಕಾರಿಗಳು | 7 | - | 7 |
| 3) | ವೈದ್ಯಾಧಿಕಾರಿಗಳು (ಕು.ಕ) | 1 | - | 1 |
| 4) | ಜಿಲ್ಲಾ ಮಲೇರಿಯಾಧಿಕಾರಿಗಳು | 1 | 1 | - |
| 5) | ಜಿಲ್ಲಾ ಲಸಿಕಾಧಿಕಾರಿಗಳು | - | - | - |
| 6) | ಜಿಲ್ಲಾ ಕ್ಷಯ ರೋಗ ನಿವಾರಣಾದಿಕಾರಿಗಳು | 1 | 1 | - |
| 7) | ಹಿರಿಯ ತಜ್ಞರು ಮತ್ತು ಉಪ ಮುಖ್ಯ ವೈದ್ಯರು | | | |
| 8) | ವೈದ್ಯಾಧಿಕಾರಿಗಳು | | | |
| 9) | ಸಹಾಯಕ ದಂತ ಚಿಕಿತ್ಸಕರು | | | |
| 10) | ಎಲ್.ಸಿ.ಡಿ.ಆರ್. | 3 | - | 3 |
| 11) | ಸಹಾಯಕ ಆಡಳಿತಾಧಿಕಾರಿಗಳು | 4 | 4 | - |
| 12) | ಜಿಲ್ಲಾ ಶುಶ್ರೂಷಣಾಧಿಕಾರಿಗಳು | 2 | - | 2 |
| 13) | ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು | 1 | - | 1 |
| 14) | ಸರ್ವಿಸ್ ಇಂಜಿನಿಯರ್ | 1 | - | 1 |
| 15) | ಎಂಟಮಾಲಜಿಸ್ಟ್ | 1 | 1 | - |
| 16) | ರಾಸಾಯನಿಕ ಪರಿವೀಕ್ಷಕರು | 1 | 1 | - |
| 17) | ಜಿಲ್ಲಾ ಆರೋಗ್ಯ ಪರಿವೀಕ್ಷಕರು | | | |
| 18) | ಉಪ ಆರೋಗ್ಯ ಶಿಕ್ಷಣಾಧಿಕಾರಿಗಳು | 2 | 2 | - |
| 19) | ಹಿರಿಯ ಪುರುಷ ಆರೋಗ್ಯ ಸಹಾಯಕರು | 45 | 14 | 31 |
| 20) | ಕಿರಿಯ ಪುರುಷ ಆರೋಗ್ಯ ಸಹಾಯಕರು | 166 | 99 | 67 |
| 21) | ಹಿರಿಯ ಪ್ರಯೋಗಶಾಲಾ ತಂತ್ರಜ್ಞರು | 12 | 1 | 11 |

| | | | | |
|---|---|---|---|---|
| 22) | ಕಿರಿಯ ಪ್ರಯೋಗಶಾಲಾ ತಂತ್ರಜ್ಞರು | 64 | 61 | 3 |
| 23) | ಹಿರಿಯ ಮಹಿಳಾ ಆರೋಗ್ಯ ಸಹಾಯಕಿ | 46 | 40 | 6 |
| 24) | ಕಿರಿಯ ಮಹಿಳಾ ಆರೋಗ್ಯ ಸಹಾಯಕಿ | 384 | 338 | 46 |
| 25) | ಸ್ಕಿಲ್ಡ್ ಟ್ರೇಡ್ಸ್ ಮನ್ | 2 | 1 | 1 |
| 26) | ಪ್ರೊಜೆಕ್ಷನಿಸ್ಟ್ | 1 | 1 | 0 |
| 27) | ಮೆಕ್ಯಾನಿಕ್ | | | |
| 28) | ಕಛೇರಿ ಅಧೀಕ್ಷಕರು | 15 | 11 | 4 |
| 29) | ದ್ವಿತೀಯ ದರ್ಜೆ ಸಹಾಯಕರು | 41 | 33 | 8 |
| 30) | ಪ್ರಥಮ ದರ್ಜೆ ಸಹಾಯಕರು | 64 | 37 | 7 |
| 31) | ಹಿರಿಯ ಶೀಘ್ರಲಿಪಿಗಾರರು | 1 | 1 | 0 |
| 32) | ಕಿರಿಯ ಶೀಘ್ರಲಿಪಿಗಾರರು | - | - | - |
| 33) | ಕಿರಿಯ ಬೆರಳಚ್ಚುಗಾರರು | | | |
| 34) | ಸಹಾಯಕ-ಯಾ-ಬೆರಳಚ್ಚುಗಾರರು | 30 | 17 | 13 |
| 35) | ವಾಹನಚಾಲಕರು | 49 | 31 | 18 |
| 36) | ಶುಶ್ರೂಷಕರು | 162 | 118 | 14 |
| 37) | ಕ್ಷ-ಕಿರಣ ತಂತ್ರಜ್ಞರು | 16 | 16 | 0 |
| 38) | ಕ್ಷೇತ್ರ ಆರೋಗ್ಯ ಶಿಕ್ಷಕರು | 13 | 4 | 9 |
| 39) | ಹಿರಿಯ ಫಾರ್ಮಾಸಿಸ್ಟ್ | 10 | 7 | 3 |
| 40) | ಕಿರಿಯ ಫಾರ್ಮಾಸಿಸ್ಟ್ | 104 | 48 | 56 |
| 41) | ಪ್ಯಾರಾ ಮೆಡಿಕಲ್ ವರ್ಕರ್ | - | - | - |
| 42) | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 3 | 3 | 0 |
| 43) | ನೇತ್ರ ಸಹಾಯಕರು | 18 | 15 | 3 |
| 44) | ಕಿರಿಯ ವೈದ್ಯೇತರ ಮೇಲ್ವಿಚಾರಕರು | | | |
| 45) | `ಡಿ` ವರ್ಗದ ನೌಕರರು | 538 | 244 | 294 |

**ಕಾರ್ಯ ನಿರ್ವಹಣಾ ವಿವರಗಳು:-**

**1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು.**

ಜಿಲ್ಲೆಯಲ್ಲಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮ, ಸಾಂಕ್ರಾಮಿಕ ರೋಗಗಳು ಮತ್ತು ತಾಯಿ ಮಕ್ಕಳ ಆರೋಗ್ಯದ ಬಗ್ಗೆ ಮೇಲ್ವಿಚಾರಣೆ, ಹಾಲಿ ಆರೋಗ್ಯ ಕಾರ್ಯಕ್ರಮದ ಮೇಲ್ವಿಚಾರಣೆ ಮತ್ತು ನಿಯಂತ್ರಣಾಧಿಕಾರಿಗಳ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದು.

**2. ತಾಲ್ಲೂಕು ಆರೋಗ್ಯಾಧಿಕಾರಿಗಳು:**

ಇವರು ತಾಲ್ಲೂಕು ವ್ಯಾಪ್ತಿಯಲ್ಲಿರುವ ಅನುದಾನ ಸಂಚಿಕೆ ಕುಟುಂಬ ಕಲ್ಯಾಣ ಕಾರ್ಯಕ್ರಮ, ಸಾಂಕ್ರಾಮಿಕ ರೋಗಗಳ ಮೇಲ್ವಿಚಾರಣೆ ಮತ್ತು ಚಿಕಿತ್ಸೆ ಮಲೇರಿಯಾ ಕಾರ್ಯಕ್ರಮ, ವೈದ್ಯರ ಮತ್ತು ಸಿಬ್ಬಂದಿಯವರ ಸಮಯ ಪಾಲನೆ, ಔಷಧಿ ಲಭ್ಯತೆ ಹಾಗೂ ದಿನಚರಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು.

**3. ವೈದ್ಯಾಧಿಕಾರಿಗಳು:-**

ಇವರು ಕುಟುಂಬ ಕಲ್ಯಾಣ ಕಾರ್ಯಕ್ರಮ ಮೇಲ್ವಿಚಾರಣೆ ಮತ್ತು ಕುಟುಂಬ ಕಲ್ಯಾಣ ಶಿಬಿರಕ್ಕೆ ದಿನಾಂಕ ನಿಗದಿಪಡಿಸುವುದು ಹಾಗೂ ಸಾಂಕ್ರಾಮಿಕ ರೋಗದ ಹತೋಟಿ.

**4. ಜಿಲ್ಲಾ ಮಲೇರಿಯಾಧಿಕಾರಿಗಳು:-**

ಇವರು ಮಲೇರಿಯಾ ಮತ್ತು ಪೈಲೇರಿಯಾ ಸಾಂಕ್ರಾಮಿಕ ರೋಗ ನಿಯಂತ್ರಕ್ಕೆ ಸಂಬಂಧಿಸಿದಂತೆ ಜಿಲ್ಲೆಯಾದ್ಯಂತ ಪರಿಶೀಲಿಸಿ ಮುಂಜಾಗ್ರತಾ ಕ್ರಮ ಪರಿಶೀಲಿಸಿ ಕ್ರಮ ಜರುಗಿಸುತ್ತಾರೆ.

**5. ಜಿಲ್ಲಾ ಲಸಿಕಾಧಿಕಾರಿಗಳು:-** ಇವರು ಜಿಲ್ಲೆಯಾದ್ಯಂತ ಪ್ರವಾಸ ಕೈಗೊಂಡು ಅಲ್ಲಲ್ಲಿ ಕ್ಯಾಂಪ್ ಹಾಗೂ ಕ್ಷಯ ರೋಗದ ಬಗ್ಗೆ ಕಫ ಪರೀಕ್ಷೆ ಮುಂತಾದ ಕಾರ್ಯಕ್ರಮ ನಿರ್ವಹಿಸುತ್ತಾರೆ ಹಾಗೂ ಕ್ಷಯ ರೋಗದ ಹತೋಟಿ ಇವರ ಜವಾಬ್ದಾರಿಯಾಗಿರುತ್ತೆ.

**6. ಜಿಲ್ಲಾ ಕ್ಷಯ ರೋಗ ನಿವಾರಣಾಧಿಕಾರಿಗಳು:-**

ಜಿಲ್ಲೆಯಾದ್ಯಂತ ಪ್ರವಾಸ ಕೈಗೊಂಡು ಅಲ್ಲಲ್ಲಿ ಕ್ಯಾಂಪ್ ಹಾಗೂ ಕ್ಷಯರೋಗದ ಬಗ್ಗೆ ಕಫ ಪರೀಕ್ಷೆ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಾರೆ ಹಾಗೂ ಕ್ಷಯ ರೋಗದ ಹತೋಟಿ ಇವರ ಜವಾಬ್ದಾರಿಯಾಗಿರುತ್ತೆ.

**7. ಹಿರಿಯ ತಜ್ಞರು ಮತ್ತು ಉಪ ಮುಖ್ಯ ವೈದ್ಯರು:-**

ಇವರು ಸಾರ್ವಜನಿಕ ಆಸ್ಪತ್ರೆಗಳಲ್ಲಿಯ ವ್ಯಕ್ತಿಗಳ ರೋಗಗಳ ಬಗ್ಗೆ ಪರಿಶೀಲಿಸಿ, ಚಿಕಿತ್ಸೆ ಮತ್ತು ಅಪರೇಷನ್ ಕಾರ್ಯಗಳನ್ನು ನಿರ್ವಹಿಸುತ್ತಾರೆ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಚಿಕಿತ್ಸೆ ಮುಂತಾದ ಕೆಲಸ ಇವರ ಜವಾಬ್ದಾರಿಯಾಗಿರುತ್ತೆ.

**8. ವೈದ್ಯಾಧಿಕಾರಿಗಳು:**

ಇವರು ಪ್ರಾಥಮಿಕ ಆರೋಗ್ಯ ಕೇಂದ್ರ, ಘಟಕಗಳಿಗೆ ಬರುವ ರೋಗಿಗಳಿಗೆ ಚಿಕಿತ್ಸೆ ಮತ್ತು ಔಷದೋಪಚಾರ, ಚಿಕಿತ್ಸೆ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಾರೆ.

**9. ಸಹಾಯಕ ದಂತ ಚಿಕಿತ್ಸಕರು:-**

ಇವರು ದಂತ ರೋಗಗಳ ಬಗ್ಗೆ ಚಿಕಿತ್ಸೆ ಹಾಗೂ ಔಷದೋಪಚಾರ ಕೆಲಸ ನಿರ್ವಹಿಸುತ್ತಾರೆ.

**10. ಎಲ್.ಸಿ.ಡಿ.ಆರ್.**

ಈ ಹುದ್ದೆಗಳು ಜಿಲ್ಲೆಯಲ್ಲಿ ರಜೆಯ ಮೇಲೆ ತೆರಳುವ ವೈದ್ಯಾಧಿಕಾರಿಗಳ ಬದಲು ಕಾರ್ಯ ನಿರ್ವಹಿಸಲು ಮಂಜೂರಾಗಿರುತ್ತದೆ.

**11. ಸಹಾಯಕ ಆಡಳಿತಾಧಿಕಾರಿಗಳು:-**

ಇವರ ಕಾರ್ಯವು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಅಧೀನದಲ್ಲಿ ಲೆಕ್ಕ ಪತ್ರ ಮತ್ತು ಸಿಬ್ಬಂದಿ ವಿಭಾಗದ ಕಾರ್ಯನಿರ್ವಹಣೆಗೆ ಸಹಕರಿಸುತ್ತಾರೆ ಮತ್ತು ಜಿಲ್ಲೆಯ ಸಿ ಮತ್ತು ಡಿ ವರ್ಗದ ನೌಕರರ ಪ್ರಯಾಣ ಭತ್ಯೆ ಹಾಗೂ ಸಾದಿಲ್ವಾರು ಬಿಲ್ಲು, ಸವಿವರ ಸಾದಿಲ್ವಾರು ಬಿಲ್ಲು ಅಧೀನ ಕಛೇರಿಯ ಬಿಲ್ಲುಗಳು ಮೇಲು ಸಹಿ ಮಾಡುವರು ಮತ್ತು ಕಛೇರಿಯ ಮೇಲುಸ್ತುವಾರಿ ನಡೆಸುವರು.

**12. ಜಿಲ್ಲಾ ಶುಶ್ರೂಷಣಾಧಿಕಾರಿಗಳು:-**

ಸದರಿಯವರು ಜಿಲ್ಲೆಯಲ್ಲಿ ತಾಯಿ ಮಕ್ಕಳ ಆರೋಗ್ಯ ಹಾಗೂ ಇತರೆ ಪ್ರಸೂತಿಗೆ ಸಂಬಂದಪಟ್ಟಂತೆ ಕಿ.ಮ.ಆ.ಸ. ಮತ್ತು ಹಿ.ಮ.ಆ.ಸ. ಇವರ ಕೆಲಸಗಳಿಗೆ ಮೇಲುಸ್ತುವಾರಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸಹಾಯಕರಾಗಿರುತ್ತಾರೆ.

**13. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು:-**

ಇವರು ಜಿಲ್ಲೆಯಲ್ಲಿ ಆರೋಗ್ಯ ಶಿಕ್ಷಣದ ಬಗ್ಗೆ ಪ್ರಚಾರ ಮತ್ತು ಅನುಷ್ಠಾನ ಗೊಳಿಸುವುದು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸಹಾಯಕರಾಗಿರುತ್ತಾರೆ.

**14. ಸರ್ವಿಸ್ ಇಂಜಿನಿಯರ್:-**

ಜಿಲ್ಲೆಯಲ್ಲಿನ ಎಲ್ಲಾ ವಾಹನಗಳ ನಿರ್ವಹಣೆ, ದುರಸ್ತಿ ಮತ್ತು ಇತರೆ ವಾಹನಗಳಿಗೆ ಸಂಬಂಧ ಪಟ್ಟಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸಹಾಯಕರಾಗಿರುತ್ತಾರೆ.

**15. ಎಂಟಮಾಲಜಿಸ್ಟ್:-**

ಇವರು ಜಿಲ್ಲೆಯಲ್ಲಿನ ಮಲೇರಿಯಾ ಮತ್ತು ಪೈಲೇರಿಯಾ ಹಾಗೂ ಸಾಂಕ್ರಾಮಿಕ ರೋಗಗಳ ಹತೋಟಿಗಾಗಿ ಕಾರ್ಯಕ್ರಮ ರೂಪಿಸುವುದು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸಹಾಯಕರಾಗಿರುತ್ತಾರೆ.

**16. ರಾಸಾಯನಿಕ ಪರವೀಕ್ಷಕರು:-**

ಇವರು ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯಲ್ಲಿನ ಅಬಕಾರಿ ಮತ್ತು ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಮದ್ಯಸಾರ ಪರಿವೀಕ್ಷಣೆ ಮಾಡುವುದು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸಹಾಯಕರಾಗಿರುತ್ತಾರೆ.

**17. ಜಿಲ್ಲಾ ಆರೋಗ್ಯ ಪರಿವೀಕ್ಷಕರು:-**

ಇವರು ಜಿಲ್ಲೆಯಲ್ಲಿನ ಮಲೇರಿಯಾ ಮತ್ತು ಪೈಲೇರಿಯಾ ಹಾಗೂ ಸಾಂಕ್ರಾಮಿಕ ರೋಗಗಳ ಹತೋಟಿಗಾಗಿ ಕಾರ್ಯಕ್ರಮ ರೂಪಿಸುವುದು ಹಾಗೂ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮ ವಹಿಸುವುದು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸಹಾಯಕರಾಗಿರುತ್ತಾರೆ.

**18. ಉಪ ಆರೋಗ್ಯ ಶಿಕ್ಷಣಾಧಿಕಾರಿಗಳು:-**

ಇವರು ಜಿಲ್ಲೆಯಲ್ಲಿ ಆರೋಗ್ಯ ಶಿಕ್ಷಣದ ಬಗ್ಗೆ ಪ್ರಚಾರ ಮತ್ತು ಅನುಷ್ಠಾನ ಗೊಳಿಸುವುದು ಹಾಗೂ ಜಿಲ್ಲಾ ಶಿಕ್ಷಣಾಧಿಕಾರಿಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ ಸದರಿ ಹುದ್ದೆಯು ಉಪವಿಭಾಗ ಮಟ್ಟದಲ್ಲಿ ಕಾರ್ಯ ನಿರ್ವಹಿಸುವರು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸಹಾಯಕರಾಗಿರುತ್ತಾರೆ.

**19. ಹಿರಿಯ ಪುರುಷ ಆರೋಗ್ಯ ಸಹಾಯಕರು:-**

ಇವರು ಕಿರಿಯ ಪುರುಷ ಆರೋಗ್ಯ ಸಹಾಯಕರ ಮೇಲ್ವಿಚಾರಣೆ ಮಾಡುವುದು ಮತ್ತು ಮಲೇರಿಯಾ ಮತ್ತು ಸಾಂಕ್ರಾಮಿಕ ರೋಗಗಳ ಹತೋಟಿಗೆ ಕ್ರಮ ವಹಿಸುವರು ಹಾಗೂ ಇವರು ವೈದ್ಯಾಧಿಕಾರಿಗಳ ಅಡಿಯಲ್ಲಿ ಕೆಲಸ ನಿರ್ವಹಿಸುವರು.

**20. ಕಿರಿಯ ಪುರುಷ ಆರೋಗ್ಯ ಸಹಾಯಕರು:-**

ಇವರ ಕಾರ್ಯ ಕ್ಷೇತ್ರವು ಗ್ರಾಮೀಣ ಪ್ರದೇಶವಾಗಿದ್ದು ಇವರು ರಾಷ್ಟ್ರೀಯ ಕಾರ್ಯಕ್ರಮಗಳಾದ ಮಲೇರಿಯಾ, ಪೈಲೇರಿಯಾ, ಕುಷ್ಠ, ಪೋಲಿಯೋ, ಅಂಧತ್ವ ಹಾಗೂ ಇನ್ನು ಉಳಿದ ಕಾರ್ಯಕ್ರಮಗಳಿಗೆ ಹಾಗೂ ನಿಯಂತ್ರಣಗಳಿಗೆ ವೈದ್ಯಾಧಿಕಾರಿಗಳಿಗೆ ಸಹಕಾರಿಯಾಗಿರುತ್ತಾರೆ ಮತ್ತು ಸಾರ್ವಜನಿಕರಿಗೆ ರೋಗಗಳ ಬಗ್ಗೆ ಮಾಹಿತಿ ಮತ್ತು ಚಿಕಿತ್ಸೆಗಳ ಬಗ್ಗೆ ಸಲಹೆ ನೀಡುವರು.

**21. ಹಿರಿಯ ಪ್ರಯೋಗಶಾಲಾ ತಂತ್ರಜ್ಞರು:-**

ಸದರಿ ಹುದ್ದೆಯು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹಾಗೂ ಜಿಲ್ಲಾ ಪ್ರಯೋಗ ಶಾಲೆಯಲ್ಲಿದ್ದು ಇವರ ಕಾರ್ಯವು ಮಲೇರಿಯಾ ರೋಗ ತಪಾಸಣೆ, ಮಧಮೇಹ, ರಕ್ತದ ಗುಂಪು, ಮಲಪರೀಕ್ಷೆ ಹಾಗೂ ಇನ್ನಿತರ ಪರೀಕ್ಷೆಗಳನ್ನು ನಡೆಸುವರು.

**22. ಕಿರಿಯ ಪ್ರಯೋಗಶಾಲಾ ತಂತ್ರಜ್ಞರು:-**

ಸದರಿ ಹುದ್ದೆಯು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಲೇರಿಯಾ ಮತ್ತು ಇತರೆ ಸಾಂಕ್ರಾಮಿಕ ರೋಗಗಳಿಗೆ ಸಂಬಂದಪಟ್ಟಂತೆ ಪರೀಕ್ಷೆಯನ್ನು ನಡೆಸುವರು.

**23. ಹಿರಿಯ ಮಹಿಳಾ ಆರೋಗ್ಯ ಸಹಾಯಕಿ:-**

ಇವರು ತಾಯಿ ಮಕ್ಕಳ ಆರೋಗ್ಯ ಮತ್ತು ಬಾಣಂತಿಯರ ಸೇವೆಯನ್ನು ನಡೆಸುವರು ಮತ್ತು ಕಿ.ಮ.ಆ.ಸ. ಇವರ ಕರ್ತವ್ಯದ ಪರಿಶೀಲನೆ ನಡೆಸುವರು ಹಾಗೂ ವೈದ್ಯಾಧಿಕಾರಿಗಳಿಗೆ ಸಹಕಾರ ನೀಡುವರು.

**24. ಕಿರಿಯ ಮಹಿಳಾ ಆರೋಗ್ಯ ಸಹಾಯಕಿ:-**

ಸದರಿ ಹುದ್ದೆಯು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಪ್ರತಿಯೊಬ್ಬರಿಗೆ ತಲಾ 3000 ಜನಸಂಖ್ಯೆಗೆ ಒಬ್ಬರಂತೆ ನಿಗದಿಪಡಿಸಿದ್ದು ಎಲ್ಲಾ ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರುವ ಕೆಲಸವಾಗಿರುತ್ತದೆ.

**25. ಸ್ಕಿಲ್ಡ್ ಟ್ರೇಡ್ಸ್‌ಮನ್:-**

ಇವರು ವಾಹನಗಳ ದುರಸ್ತಿ ಮತ್ತು ಸೇವಾಅಭಿಯಂತರರಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸುವರು.

**26. ಪ್ರೊಜೆಕ್ಷನಿಸ್ಟ್:-**

ಇವರು ಆರೋಗ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರೊಜೆಕ್ಷನ್ ಮೂಲಕ ಗ್ರಾಮೀಣ ಜನತೆಗೆ ಪ್ರಚಾರ ಮತ್ತು ಸೌಲಭ್ಯದ ಬಗ್ಗೆ ತಿಳುವಳಿಕೆ ನೀಡುವರು.

**27. ಮೆಕ್ಯಾನಿಕ್:-**

ಇವರು ವಾಹನಗಳ ಬಗ್ಗೆ ದುರಸ್ತಿ ಮತ್ತು ಸೇವಾ ಅಭಿಯಂತರರಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸುವರು.

**28. ಕಛೇರಿ ಅಧೀಕ್ಷಕರು:-**

ಸದರಿ ಹುದ್ದೆಯು ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ಮಂಜೂರಾಗಿದ್ದು ಆಡಳಿತ ವೈದ್ಯಾಧಿಕಾರಿಗಳ/ ಅಧಿಕಾರಿಗಳ ಸೂಚನೆಯಂತೆ ಮತ್ತು ಸರ್ಕಾರಿ ನಿಯಮಾನುಸಾರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ.

**29. ಪ್ರಥಮ ದರ್ಜೆ ಸಹಾಯಕರು:-**

ಸದರಿ ಹುದ್ದೆಯು ಪ್ರಾಥಮಿಕ ಆರೋಗ್ಯ ಕೇಂದ್ರ ಸಾರ್ವಜನಿಕ ಆಸ್ಪತ್ರೆ ಮತ್ತು ಜಿಲ್ಲಾ ಮಟ್ಟದ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಇವರು ಸಂಬಂದಪಟ್ಟ ಕಛೇರಿಯ ಮುಖ್ಯಸ್ಥರ ಆದೇಶದ ಮೇರೆಗೆ ಹಾಗೂ ನಿಯಮಾವಳಿಯಲ್ಲಿ ಸೂಚಿಸಿದಂತೆ ಸಾರ್ವಜನಿಕ ಸಂಪರ್ಕ ಸೇತುವೆಯಂತೆ ಕಾರ್ಯ ನಿರ್ವಹಿಸುವರು ಮತ್ತು ಕಛೇರಿಯ ಸಿಬ್ಬಂದಿಯವರಿಗೆ ವೇತನ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಿಕೊಡುವವರಾಗಿರುತ್ತಾರೆ.

**30. ದ್ವಿತೀಯ ದರ್ಜೆ ಸಹಾಯಕರು:-**

ಸದರಿ ಹುದ್ದೆಯು ಪ್ರಾಥಮಿಕ ಆರೋಗ್ಯ ಕೇಂದ್ರ ಸಾರ್ವಜನಿಕ ಆಸ್ಪತ್ರೆ ಮತ್ತು ಜಿಲ್ಲಾ ಮಟ್ಟದ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇವರು ಸಂಬಂದಪಟ್ಟ ಕಛೇರಿಯ ಮುಖ್ಯಸ್ಥರ ಆದೇಶದ ಮೇರೆಗೆ ಹಾಗೂ ನಿಯಮಾವಳಿಯಲ್ಲಿ ಸೂಚಿಸಿದಂತೆ ಸಾರ್ವಜನಿಕ ಸಂಪರ್ಕ ಸೇತುವೆಯಂತೆ ಕಾರ್ಯ ನಿರ್ವಹಿಸುವರು ಮತ್ತು ಕಛೇರಿಯ ಸಿಬ್ಬಂದಿಯವರಿಗೆ ವೇತನ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಿಕೊಡುವವರಾಗಿರುತ್ತಾರೆ.

**31. ಹಿರಿಯ ಶೀಘ್ರಲಿಪಿಗಾರರು:-**

ಮೇಲಾಧಿಕಾರಿಗಳ ಆದೇಶದಂತೆ ಕಾರ್ಯ ನಿರ್ವಹಿಸುವರು.

**32. ಕಿರಿಯ ಶೀಘ್ರಲಿಪಿಗಾರರು:-**

ಮೇಲಾಧಿಕಾರಿಗಳ ಆದೇಶದಂತೆ ಕಾರ್ಯ ನಿರ್ವಹಿಸುವರು.

**33. ಕಿರಿಯ ಬೆರಳಚ್ಚುಗಾರರು:-**

ಕಛೇರಿಯ ವಿಷಯ ನಿರ್ವಾಹಕರಿಂದ ಬರೆಯಲ್ಪಟ್ಟ ಮತ್ತು ಅನುಮೋದಿಸಿದ ಪತ್ರಗಳನ್ನು ಬೆರಳಚ್ಚು ಮಾಡುವುದು.

**34. ಸಹಾಯಕ - ಯಾ - ಬೆರಳಚ್ಚುಗಾರರು:-**

ಕಛೇರಿಯ ವಿಷಯ ನಿರ್ವಾಹಕರಿಂದ ಬರೆಯಲ್ಪಟ್ಟ ಮತ್ತು ಅನುಮೋದಿಸಿದ ಪತ್ರಗಳನ್ನು ಬೆರಳಚ್ಚು ಮಾಡುವುದು ಹಾಗೂ ಕಛೇರಿ ಕೆಲಸ ನಿರ್ವಹಿಸುವರು.

**35. ವಾಹನ ಚಾಲಕರು:-**

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಮೇಲಾಧಿಕಾರಿಗಳು ಸೂಚಿಸುವಂತೆ ಕಾರ್ಯನಿರ್ವಹಿಸುವರು. ಸಾರ್ವಜನಿಕ ಆಸ್ಪತ್ರೆಗಳಲ್ಲಿ ಆಂಬುಲೆನ್ಸ್ ವಾಹನಕ್ಕೆ ರೋಗಿಗಳಿಗೆ ತುರ್ತು ಚಿಕಿತ್ಸೆ ಸಂದರ್ಭಗಳಲ್ಲಿ ಮೇಲ್ದರ್ಜೆ ಆಸ್ಪತ್ರೆಗಳಿಗೆ ರೋಗಿಗಳನ್ನು ಸಾಗಿಸಲು ಸಹಕಾರಿಯಾಗುವರು. ಜಿಲ್ಲಾ ಮಟ್ಟದಲ್ಲಿನ ಮೇಲಾಧಿಕಾರಿಗಳ ಹುದ್ದೆಗೆ ಮೀಸಲಾದ ವಾಹನವನ್ನು ಚಾಲನೆ ಮಾಡುವರು.

**36. ಶುಶ್ರೂಷಕರು:-**

ಪ್ರಾಥಮಿಕ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹೊರರೋಗಿ ಮತ್ತು ಒಳರೋಗಿಗಳಿಗೆ ಚಿಕಿತ್ಸೆ ನಡೆಸುವರು ಹಾಗೂ ವೈದ್ಯಾಧಿಕಾರಿಗಳು ಸೂಚಿಸಿದಂತೆ ಕಾರ್ಯನಿರ್ವಹಿಸುವರು.

**37. ಕ್ಷ-ಕಿರಣ ತಂತ್ರಜ್ಞರು:-**

ಇವರು ರೋಗಕ್ಕೆ ಸಂಬಂದ ಪಟ್ಟಂತೆ ಎಕ್ಸ್-ರೇ ಯನ್ನು ತೆಗೆಯುವರು ಹಾಗೂ ವೈದ್ಯಾಧಿಕಾರಿಗಳಿಗೆ ಸಹಕಾರಿಯಾಗುವರು.

**38. ಕ್ಷೇತ್ರ ಆರೋಗ್ಯ ಶಿಕ್ಷಕರು:-**

ಆರೋಗ್ಯ ಶಿಕ್ಷಣ ಮತ್ತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡುವರು ಹಾಗೂ ವೈದ್ಯಾಧಿಕಾರಿಗಳಿಗೆ ಸಹಕಾರಿಯಾಗುವರು.

**39. ಹಿರಿಯ ಫಾರ್ಮಾಸಿಸ್ಟ್:-**

ಸದರಿ ಹುದ್ದೆಯು ಸಾರ್ವಜನಿಕ ಆಸ್ಪತ್ರೆಗಳಲ್ಲಿದ್ದು ರೋಗಿಗಳಿಗೆ ಔಷಧಿ ವಿತರಣೆ ಔಷಧಿ ಉಗ್ರಾಣದ ನಿರ್ವಹಣೆ ಮಾಡುವರು ಹಾಗೂ ವೈದ್ಯಾಧಿಕಾರಿಗಳಿಗೆ ಸಹಕಾರಿಯಾಗಿರುವವರು.

**40. ಕಿರಿಯ ಫಾರ್ಮಾಸಿಸ್ಟ್:-**

ಇವರು ಪ್ರಾಥಮಿಕ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆಗಳಲ್ಲಿ ಬರುವ ರೋಗಿಗಳಿಗೆ ಔಷಧಿಗಳನ್ನು ವಿತರಣೆ ಮಾಡುವರು ಹಾಗೂ ವೈದ್ಯಾದಿಕಾರಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ.

**41. ಪ್ಯಾರಾ ಮೆಡಿಕಲ್ ವರ್ಕರ್:-**

ಇವರು ರಾಷ್ಟ್ರೀಯ ಕಾರ್ಯಕ್ರಮಗಳಾದ ಪಲ್ಸ್ ಪೋಲಿಯೋ, ಕುಷ್ಠರೋಗದ ಚಿಕಿತ್ಸೆ ಮತ್ತು ನಿವಾರಣೆಗೆ ಸಹಕಾರಿಯಾಗಿರುತ್ತಾರೆ.

**42. ಸಹಾಯಕ ಸಾಂಖ್ಯಿಕ ಅಧಿಕಾರಿಗಳು:-**

ಇವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಅಂಕಿ ಅಂಶ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಾರೆ.

**43. ನೇತ್ರ ಸಹಾಯಕರು:-**

ಇವರು ಸಾರ್ವಜನಿಕ ಆಸ್ಪತ್ರೆಗಳಲ್ಲಿ, ಪ್ರಾ.ಆ.ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ವ್ಯಾಪ್ತಿಯಲ್ಲಿ ಕಣ್ಣಿನ ಚಿಕಿತ್ಸೆ ಬಗ್ಗೆ ಕಾರ್ಯ ನಿರ್ವಹಿಸುವರು.

**44. `ಡಿ` ವರ್ಗದ ನೌಕರರು:-**

ಇವರು ಪ್ರಾ.ಆ.ಕೇಂದ್ರ, ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸ್ವಚ್ಛತಾ ಕಾರ್ಯಗಳನ್ನು ಮತ್ತು ಕಛೇರಿಯ ವಿವಿಧ ವಿಭಾಗಗಳಲ್ಲಿ ಸಿಬ್ಬಂದಿಗಳಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ.

**ಚಿಕ್ಕಮಗಳೂರು ಜಿಲ್ಲೆಯಲ್ಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಅಧೀನ ಸಂಸ್ಥೆಗಳ ವಿವರ ಹಾಗೂ ಕಾರ್ಯ ಸೂಚಿ.**

| ಕ್ರ.ಸಂ | ತಾಲ್ಲೂಕು | ಸಾರ್ವಜನಿಕ ಆಸ್ಪತ್ರೆ | ಪ್ರಾಥಮಿಕ ಆರೋಗ್ಯ ಕೇಂದ್ರ | ಉಪಕೇಂದ್ರಗಳು |
|---|---|---|---|---|
| 1 | ಚಿಕ್ಕಮಗಳೂರು ತಾಲ್ಲೂಕು | - | 16 | 60 |
| 2 | ಕಡೂರು ತಾಲ್ಲೂಕು | 2 | 26 | 86 |
| 3 | ತರೀಕೆರೆ ತಾಲ್ಲೂಕು | 1 | 14 | 63 |
| 4 | ನ.ರಾ.ಪುರ ತಾಲ್ಲೂಕು | 1 | 4 | 27 |
| 5 | ಕೊಪ್ಪ ತಾಲ್ಲೂಕು | 1 | 9 | 44 |
| 6 | ಶೃಂಗೇರಿ ತಾಲ್ಲೂಕು | 1 | 2 | 16 |
| 7 | ಮೂಡಿಗೆರೆ ತಾಲ್ಲೂಕು | 1 | 16 | 74 |
| | ಒಟ್ಟು | 7 | 89 | 384 |

**ಇದರಲ್ಲಿ ಪ್ರತಿ ತಾಲ್ಲೂಕಿನಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿ ಇದೆ. ಚಿಕ್ಕಮಗಳೂರು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಪ್ರಯೋಗ ಶಾಲೆ, ಜಿಲ್ಲಾ ಕ್ಷಯರೋಗ ನಿವಾರಣಾ ಕೇಂದ್ರ ಮತ್ತು ಪ್ರಾದೇಶಿಕ ರಾಸಾಯನಿಕ ಪ್ರಯೋಗ ಶಾಲೆ ಇದೆ.**

**1. ತಾಲ್ಲೂಕು ಆರೋಗ್ಯಾಧಿಕಾರಿಗಳು:-**

ತಾಲ್ಲೂಕು ಆರೋಗ್ಯಾಧಿಕಾರಿಗಳು ಸಂಬಂದಪಟ್ಟ ತಾಲ್ಲೂಕುಗಳಲ್ಲಿ ಆರೋಗ್ಯ, ಮಲೇರಿಯಾ, ಕುಷ್ಠ, ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ಇತರೆ ಆರೋಗ್ಯ ಕಾರ್ಯದ ರೂಪುರೇಷೆಗಳನ್ನು ತಯಾರಿಸುವುದು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳೊಂದಿಗೆ ಅನುಷ್ಠಾನಗೊಳಿಸುವುದು. ಇವರಿಗೆ ಆದ ಕಛೇರಿ ಹಾಗೂ ಸಿಬ್ಬಂದಿ ವಿಭಾಗ ಇರುತ್ತದೆ.

**ಸಾರ್ವಜನಿಕ ಆಸ್ಪತ್ರೆ:-**

ಜಿಲ್ಲೆಯಲ್ಲಿ ಒಟ್ಟು 7ಸಾರ್ವಜನಿಕ ಆಸ್ಪತ್ರೆ ಸ್ವಂತ ಕಟ್ಟಡ ಹೊಂದಿದ್ದು ತಜ್ಞ ವೈದ್ಯರು, ಶಸ್ತ್ರ ಚಿಕಿತ್ಸಕರು ಹಾಗೂ ಮಹಿಳಾ ವೈದ್ಯರು, ಪ್ರಸೂತಿ ವಿಭಾಗ, ಮಕ್ಕಳ ವೈದ್ಯರು, ಕಣ್ಣು ಕಿವಿ, ಮೂಗು ಹಾಗೂ ಗಂಟಲು ಹಾಗೂ ಇತರೆ ರೋಗಗಳಿಗೆ ಚಿಕಿತ್ಸೆಗೆ ಅವಕಾಶ ವಿರುತ್ತದೆ. ಇಲ್ಲಿ ಕ್ಷ-ಕಿರಣ, ಪ್ರಯೋಗ ಶಾಲೆ, ಇ.ಸಿ.ಜಿ, ಒಳರೋಗಿಗಳಿಗೆ ಚಿಕಿತ್ಸೆ ಹಾಗೂ ಔಷಧಿಗಳ ವಿತರಣೆ ಇರುತ್ತದೆ. ಇದಕ್ಕೆ ಸಹಕಾರಿಯಾಗಿ ಔಷಧಿ ವಿತರಕರು, ಶುಶ್ರೂಷಕಿ, ಕ್ಷ-ಕಿರಣ ಹಾಗೂ ಪ್ರಯೋಗ ಶಾಲೆ ತಂತ್ರಜ್ಞರು, ಕಛೇರಿ ಸಿಬ್ಬಂದಿ ಮತ್ತು `ಡಿ` ದರ್ಜೆ ನೌಕರರು ಕಾರ್ಯ ನಿರ್ವಹಿಸುತ್ತಾರೆ.

**ಪ್ರಾಥಮಿಕ ಆರೋಗ್ಯ ಕೇಂದ್ರ:-**

ಜಿಲ್ಲೆಯಲ್ಲಿ 89 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಅದರಲ್ಲಿ 21 ಕೇಂದ್ರಗಳಲ್ಲಿ 2ಜನ ವೈದ್ಯರು ಹಾಗೂ ಉಳಿದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಬ್ಬ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಮಹಿಳಾ ವೈದ್ಯರು ಇರುವಲ್ಲಿ ಮಹಿಳೆಯರಿಗೆ ಪ್ರಸೂತಿ ಹಾಗೂ ಸ್ತ್ರೀ ರೋಗದ ಬಗ್ಗೆ ಚಿಕಿತ್ಸೆ ಮತ್ತು ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಸಹಕಾರಿಯಾಗಲಿದ್ದಾರೆ ಮತ್ತು ಇವರಿಗೆ ತಜ್ಞ ಸಿಬ್ಬಂದಿಯವರು ಸಹಕರಿಸುವರು ಮತ್ತು ಇಲ್ಲಿ

ಕಛೇರಿ ಸಿಬ್ಬಂದಿ ಮತ್ತು `ಡಿ` ದರ್ಜೆ ನೌಕರರು ಇದ್ದಾರೆ. ಇವರು ಜಿಲ್ಲಾ ಆರೋಗ್ಯ ಕಾರ್ಯ ಕ್ರಮಗಳ ಬಗ್ಗೆ ಮೇಲಾಧಿಕಾರಿಗಳಿಗೆ ಸಹಕಾರಿಯಾಗಲಿದ್ದಾರೆ.

**ಉಪಕೇಂದ್ರಗಳು:-**

ಜಿಲ್ಲೆಯಲ್ಲಿ ಒಟ್ಟು 384 ಉಪಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು ಇಲ್ಲಿ ಮಹಿಳಾ ಆರೋಗ್ಯ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದು ಇವುಗಳು ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಉಪಕೇಂದ್ರವೂ ಸುಮಾರು 3000 ಸಾವಿರ ಜನಸಂಖ್ಯೆ ಹೊಂದಿರುತ್ತದೆ. ಇವರುಗಳು ಮಕ್ಕಳಿಗೆ ಪೋಲಿಯೋ ಮತ್ತು ಇತರೆ ಲಸಿಕೆ, ಕುಟುಂಬ ಕಲ್ಯಾಣ ಪರಿವಾರ ನಿಯಂತ್ರಣ ಹಾಗೂ ಇನ್ನಿತರೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಗಳಲ್ಲಿ ಭಾಗವಹಿಸಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರ್ಯ ನಿರ್ವಹಿಸುವರು, ಇದಲ್ಲದೆ 44 ಹಿ.ಪು.ಆ.ಸ. 48 ಹಿ.ಮ.ಆ.ಸ. (ಮಹಿಳಾ), 14 ಕ್ಷೇತ್ರ ಆರೋಗ್ಯ ಶಿಕ್ಷಕರು, 168 ಪುರುಷ ಆರೋಗ್ಯ ಸಹಾಯಕರು, 14 ನೇತ್ರ ಸಹಾಯಕರು ಇವರೂ ಸಹಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ ಕುಟುಂಬ ಕಲ್ಯಾಣ ಪರಿವಾರ ಯೋಜನೆ, ಕ್ಷಯ, ಕುಷ್ಠ, ಕಣ್ಣಿನ ಚಿಕಿತ್ಸೆ ಹಾಗೂ ಇನ್ನಿತರೆ ಆರೋಗ್ಯ ಸೇವೆಗಳನ್ನು ಜನರಿಗೆ/ ಸಾರ್ವಜನಿಕರಿಗೆ ಒದಗಿಸಲು ಸಹಾಯಕವಾಗಲಿದ್ದಾರೆ. ಈ ಎಲ್ಲಾ ಸಿಬ್ಬಂದಿ ಮತ್ತು ಆರೋಗ್ಯ ಕಾರ್ಯ ಕರ್ತರು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರಿಯಾಗಲಿದ್ದಾರೆ.

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ**
**ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು**